No. of Printed Pages : **6**

# 6104

*Register Number* | | | | | | |

# Language — Part I — KANNADA

Time Allowed : 3.00 Hours ]                                        [ Maximum Marks : 100

**ಸೂಚನೆಗಳು :** (1) ಪ್ರಶ್ನೆ ಪತ್ರಿಕೆಯ ಮುದ್ರಣ ಸ್ವಚ್ಛವಾಗಿದೆಯೇ ಎಂದು ಖಾತರಿಪಡಿಸಿಕೊಳ್ಳಿ. ಸ್ವಚ್ಛತೆಯಲ್ಲಿ ಏನಾದರೂ ಕೊರತೆ ಇದ್ದಲ್ಲಿ ತಕ್ಷಣವೇ ಕೊಠಡಿ ಮೇಲ್ವಿಚಾರಕರಿಗೆ ತಿಳಿಸಿರಿ.

(2) ಉತ್ತರವನ್ನು ಬರೆಯಲು **ಕಪ್ಪು** ಅಥವಾ **ನೀಲಿ** ಶಾಯಿಯನ್ನು ಉಪಯೋಗಿಸಿರಿ.

**ಭಾಗ - I**

**(15 ಅಂಕಗಳು)**

**ಸರಿಯಾದ** ಉತ್ತರವನ್ನು ಆರಿಸಿ ಬರೆಯಿರಿ. **15x1=15**

Choose and write the **correct** answer.

**1.** ಗುರುವನ್ನು – ಈ ಪದದಲ್ಲಿನ ವಿಭಕ್ತಿ ಪ್ರತ್ಯಯ _________.

(ಅ) ಪ್ರಥಮ (ಆ) ದ್ವಿತೀಯ (ಇ) ತೃತೀಯ (ಈ) ಪಂಚಮಿ

**2.** ಹೆಬ್ಬಾಗಿಲು – ಈ ಪದದಲ್ಲಿನ ಸಮಾಸ _________.

(ಅ) ಕರ್ಮಧಾರಯ ಸಮಾಸ (ಆ) ತತ್ಪುರುಷ ಸಮಾಸ

(ಇ) ದ್ವಿಗು ಸಮಾಸ (ಈ) ಕ್ರೀಯಾ ಸಮಾಸ

**3.** ಎರಡು ವಸ್ತುಗಳಿಗೆ ಪರಸ್ಪರವಾಗಿ ಇರುವ ಸಾದೃಶ್ಯ ಸಂಪತ್ತನ್ನು ಹೋಲಿಸಿ ಹೇಳುವುದಕ್ಕೆ _________ ಎಂದು ಹೆಸರು.

(ಅ) ಅರ್ಥಾಲಂಕಾರ (ಆ) ಉಪಮಾಲಂಕಾರ (ಇ) ರೂಪಕ ಅಲಂಕಾರ (ಈ) ಶ್ಲೇಷಾಲಂಕಾರ

**4.** ಕೆರೆಯನ್ನು ಇದು _________ ಸಂಧಿಗೆ ಉದಾಹರಣೆಯಾಗಿದೆ.

(ಅ) ಆಗಮ ಸಂಧಿ (ಆ) ಆದೇಶ ಸಂಧಿ (ಇ) ಲೋಪ ಸಂಧಿ (ಈ) ಗುಣ ಸಂಧಿ

**5.** ಛಂದಸ್ಸು ಎಂದರೆ _________ ನಿಯಮಗಳನ್ನು ತಿಳಿಸುವ ಶಾಸ್ತ್ರವಾಗಿದೆ.

(ಅ) ಪದ್ಯದ (ಆ) ಗದ್ಯದ (ಇ) ಅಲಂಕಾರದ (ಈ) ಸಂಸ್ಕೃತದ

[ Turn over

https://www.tamilnaduboard.com

6. ಶೃಂಗಾರ ಪದದ ತದ್ಭವ ರೂಪ __________.
(ಅ) ಸಿಂಗಾರ (ಆ) ಶೃಂಗಾರ (ಇ) ಸರಿಗಾರ (ಈ) ಶರಗಾರ

7. ಸಿದ್ಧರಾಮನಿಗೆ ಶಿವನು ಮೊದಲು ದರ್ಶನ ಕೊಟ್ಟ ಸ್ಥಳ __________.
(ಅ) ಶ್ರೀಶೈಲ (ಆ) ನವಣೆಯ ಹೊಲ (ಇ) ರುದ್ರಗಮ್ಮರಿ (ಈ) ಅರಣ್ಯ

8. ಪಾಂಚಾಲೆ ಎಂದರೆ __________.
(ಅ) ದ್ರೌಪದಿ (ಆ) ಸೀತೆ (ಇ) ಅಹಲ್ಯ (ಈ) ಕೌಶಲ್ಯ

9. "ಪಣಿ" – ಪದದ ಅರ್ಥ __________.
(ಅ) ತ್ರಿಶೂಲ (ಆ) ಹಾವು (ಇ) ವೃಷಭ (ಈ) ಹುಲಿ

10. ರಾಘವಾಂಕನ ಕಾಲ ಕ್ರಿ.ಶ. __________.
(ಅ) ಕ್ರಿ.ಶ. 1165 (ಆ) ಕ್ರಿ.ಶ. 1150 (ಇ) ಕ್ರಿ.ಶ. 1250 (ಈ) ಕ್ರಿ.ಶ. 1350

11. ಭ್ರಮರ – ಈ ಪದದಲ್ಲಿನ ಸಮಾನಾರ್ಥಕ ಪದ __________.
(ಅ) ದುಂಬಿ (ಆ) ಚಿಟ್ಟೆ (ಇ) ಪತಂಗ (ಈ) ಉರಗ

12. ವ್ಯಾಸಂಗದ ಹವ್ಯಾಸ ಎಂಬ ಗದ್ಯದ ಕರ್ತೃ __________.
(ಅ) ಸಿ.ಪಿ.ಕೆ. (ಆ) ಡಿ.ಎಲ್. ನರಸಿಂಹಾಚಾರ್
(ಇ) ರಾ. ಗೋಪಾಲರೆಡ್ಡಿ (ಈ) ಬಸವರಾಜ ಕಟ್ಟೀಮಣಿ

13. ಇದು ಒಂದು ರೂಢನಾಮಕ್ಕೆ ಉದಾಹರಣೆಯಾಗಿದೆ.
(ಅ) ಪರ್ವತ (ಆ) ಕುಂಟ (ಇ) ಚಾಲಕ (ಈ) ರಾಮ

14. ನರಕ – ಈ ಪದದ ವಿರುದ್ಧಾರ್ಥ __________.
(ಅ) ನಾಕ (ಆ) ಭೂಲೋಕ (ಇ) ಪಾತಾಳ ಲೋಕ (ಈ) ಆಕಾಶ

15. "ಉಭಯ ಕವಿ ಕಮಲ ರವಿ" ಮತ್ತು "ಕವಿ ಶರಭ ಭೇರುಂಡ" ಎಂಬ ಬಿರುದುಗಳನ್ನು ಪಡೆದ ಕವಿ __________.
(ಅ) ರಾಘವಾಂಕ (ಆ) ಡಿ.ಎಲ್. ನರಸಿಂಹಾಚಾರ್
(ಇ) ಬಸವರಾಜ ಕಟ್ಟೀಮಣಿ (ಈ) ಸಿ.ಪಿ.ಕೆ.

https://www.tamilnaduboard.com

### ಭಾಗ - II

**(18 ಅಂಕಗಳು)**

### ವಿಭಾಗ - 1

ಕೊಟ್ಟಿರುವ ಪ್ರಶ್ನೆಗಳಲ್ಲಿ **ಯಾವುದಾದರೂ ನಾಲ್ಕಕ್ಕೆ** ಉತ್ತರಿಸಿರಿ. **4x2=8**

Answer **any four** questions.

16. ಸ್ವಾಭಿಮಾನ ಎಂದರೇನು ?

17. ಭಾರತದ ರಾಷ್ಟ್ರೀಯ ಹಬ್ಬಗಳು ಯಾವುವು ?

18. ಪುಲಿಗೆರೆಯ ಸೋಮೇಶ್ವರನು ಹೇಳಿದ ಮಾತುಗಳೇನು ?

19. ಅಭಯರುಚಿಯು ರಾಜನನ್ನು ಏನೆಂದು ಹರಸಿದರು ?

20. ಬಸವಣ್ಣನವರ ದೃಷ್ಟಿಯಲ್ಲಿ ಧರ್ಮ ಎಂದರೇನು ?

21. ರಾಮಬಾಣ, ಗಧಾ ಪ್ರಹಾರ – ಈ ಪದಗಳನ್ನು ಬಳಸಿ ಸ್ವಂತವಾಕ್ಯ ರಚಿಸಿರಿ.

### ವಿಭಾಗ - 2

ಕೊಟ್ಟಿರುವ ಪ್ರಶ್ನೆಗಳಲ್ಲಿ **ಯಾವುದಾದರೂ ಐದಕ್ಕೆ** ಮಾತ್ರ ಸಂಕ್ಷಿಪ್ತವಾಗಿ ಉತ್ತರಿಸಿ. **5x2=10**

Answer **any five** questions briefly.

22. ಕೃಷ್ಣನು ಭೀಮನಿಗೆ ಹೇಗೆ ಸೂಚನೆ ಕೊಟ್ಟನು ?

23. ಸಿದ್ಧರಾಮನ ಪ್ರಲಾಪಕ್ಕೆ ಮರಗಿಡಗಳು ಯಾವ ರೀತಿ ಪ್ರತಿಕ್ರೀಯೆ ನೀಡಿದವು ?

24. ಭ್ರಾಂತಿಯೆಂಬ ತಾಯಿಯು ತೊಟ್ಟಿಲೊಳಗೆ ಏನನ್ನು ಮಲಗಿಸಿ ಜೋಗುಳವಾಡುತ್ತಿದ್ದಾಳೆ ?

25. ಕನ್ನಡ ತಾಯಿಯ ಬಸಿರ ಹೊನ್ನಗನಿ ಯಾರು ?

26. ಯುವ ಜನರಿಗೆ ಕವಿ ನೀಡುವ ಕರೆ ಯಾವುದು ?

27. ಅವನೂರು, ಕಂಬನಿ – ಈ ಪದಗಳನ್ನು ಬಿಡಿಸಿ ಸಂಧಿಯನ್ನು ಹೆಸರಿಸಿ.

28. ಒಗ್ಗಟ್ಟು, ಕಣ್ದೆರೆ – ಈ ಪದಗಳನ್ನು ಬಿಡಿಸಿ ಸಮಾಸವನ್ನು ಹೆಸರಿಸಿ.

[ Turn over

https://www.tamilnaduboard.com

## ಭಾಗ - III

**(18 ಅಂಕಗಳು)**

ಕೊಟ್ಟಿರುವ ಪ್ರಶ್ನೆಗಳಲ್ಲಿ ಪ್ರತಿ ವಿಭಾಗದಿಂದ **ಯಾವುದಾದರೂ ಎರಡು** ಪ್ರಶ್ನೆಗಳಿಗೆ ಮಾತ್ರ ಉತ್ತರಿಸಿರಿ. (**34** ನೇ ಪ್ರಶ್ನೆ **ಕಡ್ಡಾಯ**).

Answer **any two** questions from each section. (Question No. **34** is **compulsory**).

### ವಿಭಾಗ - 1 **2x3=6**

**29.** ದೇವಾಲಯಗಳ ನಿರ್ಮಾಣದ ಬಗೆಗೆ ಬಸವಣ್ಣನವರ ವಿಚಾರಗಳಾವುವು ?

**30.** ನಡು ವಯಸ್ಸಿನ ಮಹಿಳೆಯನ್ನು ಕಂಡಾಗ ಹುಡುಗನ ಮನಸ್ಸಿನಲ್ಲಿ ಮೂಡಿದ ಭಾವನೆಗಳಾವುವು ?

**31.** ಅಮೃತಮತಿಯ ಮನಸ್ಸು ಕದಡಲು ಕಾರಣವಾದ ಘಟನೆಯನ್ನು ಬರೆಯಿರಿ.

### ವಿಭಾಗ - 2 **2x3=6**

**32.** ಯುವ ಜನಾಂಗವು ಮುಂದೆ ಬಂದರೆ ಯಾರನ್ನು ನಾವು ಈ ಭೂಮಿಗೆ ಎಳೆದು ತರಬಹುದು ?

**33.** ಮಾನವೀಯತೆಯ ಬಗೆಗೆ ಕವಿ ಹೇಳುವ ವಿಚಾರಗಳೇನು ?

**34.** ಈ ಪದ್ಯಭಾಗವನ್ನು ಪೂರ್ತಿಗೊಳಿಸಿರಿ.

Quote from memory.

(ಅ) ಗುರು ಕಾರುಣ್ಯವೆ...........ಕೂಡಲಸಂಗಮದೇವಾ॥

**ಅಥವಾ**

(ಅ) ಹೇಮಂತ ಋತು ರಾಜನಿಳೆಗೆ..........ಮಾರುತನಿಲ್ಲ॥

### ವಿಭಾಗ - 3 **2x3=6**

**35.** ಸಂಧಿ ಎಂದರೇನು ? ಸಂಧಿಗಳಲ್ಲಿ ಎಷ್ಟು ವಿಧ ? ಅವು ಯಾವುವು ?

**36.** ಕರ್ಮಧಾರಯ ಸಮಾಸ ಎಂದರೇನು ? ಉದಾಹರಣೆ ಕೊಡಿ.

**37.** ಮೆರೆಯುತಿದ್ದ ಭಾಗ್ಯವೆಲ್ಲ
ಹಜೆದು ಹೋಯಿತೆನುತ ತಿರುಕ
ಮರಳಿ ನಾಚಿ ಪೋಗುತಿದ್ದ ಮರಳನಂತೆಯೇ॥

– ಈ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿರಿ.

https://www.tamilnaduboard.com

## ಭಾಗ - IV

**(25 ಅಂಕಗಳು)**

ಕೊಟ್ಟಿರುವ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿರಿ. **5x5=25**

Answer **all** the questions.

**38.** (ಅ) ಅಜ್ಜ ಮತ್ತು ಬೂಟ್ ಪಾಲಿಶ್ ಹುಡುಗನ ಸಂಬಂಧವನ್ನು ವಿವರಿಸಿ.

**ಅಥವಾ**

(ಆ) ಭಾರತೀಯ ಸಾಹಿತ್ಯದ ಬಗ್ಗೆ ವಿವರಿಸಿ.

**39.** (ಅ) ಮಲ್ಲಿನಾಥನು ತೋರಿದ ನಿಜರೂಪವನ್ನು ವರ್ಣಿಸಿರಿ.

**ಅಥವಾ**

(ಆ) ಅಕ್ಕಮಹಾದೇವಿಯು ಗುರುವಿನ ವಿಶೇಷತೆಯನ್ನು ತನ್ನ ವಚನಗಳಲ್ಲಿ ಹೇಗೆ ಬಿಂಬಿಸಿದ್ದಾಳೆ ?

**40.** ನಿಮ್ಮ ಊರಿಗೆ ರಸ್ತೆ ಸೌಕರ್ಯವನ್ನು ಒದಗಿಸಿಕೊಡುವಂತೆ ಕೋರಿ ಜಿಲ್ಲಾಧಿಕಾರಿಗೆ ಅರ್ಜಿ ಬರೆಯಿರಿ.

**41.** "ಬೆಳೆವ ಸಿರಿ ಮೊಳಕೆಯಲ್ಲಿ" – ಈ ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ.

**42.** (ಅ) ಕುರುಡನೊಬ್ಬ ಕೋಲು ಹಿಡಿದು ದಿಕ್ಕು ತೋಚದೆ ಕಂಗಾಲಾಗಿ ರಸ್ತೆಯನ್ನು ದಾಟಲೂ ಆಗದೆ, ರಸ್ತೆ ಬದಿಯಲ್ಲಿ ನಿಂತಿರುತ್ತಾನೆ. ಅದೇ ಸಮಯಕ್ಕೆ ವಿದ್ಯಾರ್ಥಿಯೊಬ್ಬ ಅದೇ ಮಾರ್ಗವಾಗಿ ಬರುತ್ತಾನೆ.....ದಡ ಸೇರಿಸುತ್ತಾನೆ.

ಈ ಕತೆಯನ್ನು ಪೂರ್ಣಗೊಳಿಸಿ. ಸೂಕ್ತ ಶೀರ್ಷಿಕೆಯನ್ನು ಬರೆಯಿರಿ.

**ಅಥವಾ**

(ಆ) ಈ ಆಂಗ್ಲ ಗಾದೆಗಳಿಗೆ ಸರಿಹೊಂದುವ ಕನ್ನಡ ಗಾದೆ ಮಾತನ್ನು ಬರೆಯಿರಿ.

(i) Health is Wealth.

(ii) Sound mind in a Sound body.

(iii) All that glitters is not gold.

(iv) The pen is mightier than the sword.

(v) Prevention is better than cure.

[ Turn over

https://www.tamilnaduboard.com

## ಭಾಗ - V

(24 ಅಂಕಗಳು) 3x8=24

43. (ಅ) ಅಷ್ಟವಂಕನ ರೂಪವನ್ನು ಗೆಳತಿಯ ಮಾತುಗಳಲ್ಲಿ ಬಣ್ಣಿಸಿ.

**ಅಥವಾ**

(ಆ) ಸ್ತ್ರೀ–ಪುರುಷ ಸಮಾನತೆ ಮತ್ತು ಏಕದೇವೋಪಾಸನೆಗಳ ಬಗ್ಗೆ ಬಸವಣ್ಣನವರ ಅಭಿಪ್ರಾಯವೇನು ?

44. (ಅ) ರೋಮ್ ನಗರದಲ್ಲಿ ಲೇಖಕರಿಗಾದ ಮಳೆಯ ಅನುಭವವನ್ನು ಚಿತ್ರಿಸಿ.

**ಅಥವಾ**

(ಆ) ಬಾಲ್ಯದಲ್ಲಿ ಮನಸೂರರ ಮನಸ್ಸಿನ ಮೇಲೆ ಪರಿಣಾಮ ಬೀರಿದ ಸಂಗೀತ ಪರಿಸರವನ್ನು ವಿವರಿಸಿ.

45. ಕೊಟ್ಟಿರುವ ವಿಷಯಗಳಲ್ಲಿ **ಯಾವುದಾದರೂ ಒಂದನ್ನು** ಕುರಿತು ಪ್ರಬಂಧವನ್ನು ಬರೆಯಿರಿ.

(ಅ) ವಾಯುಮಾಲಿನ್ಯ

(ಆ) ಕೋವಿಡ್–19

- o O o -

https://www.tamilnaduboard.com